ಕಾರಿನಲ್ಲಿ ಕುಳಿತು ಹೋಟೆಲ್ ಬಳಿ ಹೋಗಲು ಡ್ರೈವರ್‌ಗೆ ಹೇಳಿದೆ.

ಉತ್ತಮ ಹೋಟೆಲ್ ಆದರೂ ಪುಟ್ಟ ಹೋಟೆಲ್. ಊರು ಕೂಡ ಪುಟ್ಟದೇ... ಇಲ್ಲಿ ಹೀಗೆ ನಾನು ಬರುತ್ತಿರುವುದು ಇದೇ ಮೊದಲು... ಸರಿಯೇ ನಾನು ಮಾಡುತ್ತಿರುವುದು...ಮೆಟ್ಟಿಲ ಬಳಿ ನಿಂತು ಒಳಗೆ ಹೋಗಲೋ...ಅವನನ್ನೇ ಆಚೆ ಕರೆಸಲೋ ಎಂದು ಯೋಚಿಸುತ್ತಿರುವಂತೆಯೇ ಮುಂದೆ ಬಂದು ನಿಂತ ವಿಶ್ವಾಸನನ್ನು ನೋಡಿ ಅರೆಕ್ಷಣ ಗಾಬರಿಯಾಯಿತು.

ಹಲೋ ಮೇಡಂ... ನನ್ನ ರೂಮಿನ ಕಿಟಕಿಯಿಂದ ನೀವು ಬಂದಿದ್ದು ಕಾಣಿಸ್ತು... ಅದಕ್ಕೆ ಬಂದೆ... ಬನ್ನಿ ... ಕಾಫಿ ತರಿಸ್ಲಾ..

ಈಗ ಬೇಡ... ನಾನು...

ನಮಸ್ಕಾರ ಮೇಡಂ... ಬನ್ನಿ ಮೇಡಂ ... ರಿಸೆಪ್ಷನ್ನಿನ ಡೆಸ್ಕ್‌ನಲ್ಲಿ ಕೂತಿದ್ದ ವ್ಯಕ್ತಿ ಧಾವಿಸಿ ಬಂದು ನನ್ನ ಮುಂದೆ ಕೈಕಟ್ಟಿ ನಿಂತಾಗ ಉಗುಳು ನುಂಗಿದೆ.

ಇಲ್ಲೇ ಯಜಮಾನರ ಆಫೀಸಿನ ಬಾಗಿಲು ತೆಗಿತೀನಿ... ನೀವು ಅಲ್ಲಿ ಮಾತಾಡಿ ಮೇಡಂ... ನಾನು ಕಾಫಿ ಕಳಿಸ್ತೀನಿ...

ಹೆಚ್ಚು ತಡವರಿಸಿದರೆ ಮತ್ತಷ್ಟು ಜನ ಸೇರುತ್ತಾರೆ... ಹಳ್ಳಿ ಮನೆ ಸೊಸೆ ಯಾರನ್ನೋ ಭೇಟಿ ಮಾಡಲು ಹೋಟೆಲ್ಲಿಗೆ ಬಂದಿದ್ದು ಅಂತ ದೊಡ್ಡ ಸುದ್ದಿ ಆಗುತ್ತೆ... ಮನೆಗೆ ಬನ್ನಿ ಅಂತ ವಿಶ್ವಾಸ್‌ಗೆ ನರಹರಿ ಕೈಲಿ ಹೇಳಿ ಕಳಿಸಬೇಕಿತ್ತು...ಈಗ ಆ ಮೀರ ಬೇಗ ಬಂದರೆ ಸಾಕು...ಸರಸರನೆ ಆಫೀಸಿನೊಳಗೆ ನಡೆದೆ. ವಿಶ್ವಾಸ್ ಹಿಂದೆಯೇ ಬಂದ... ಬಾಗಿಲು ಅದಾಗದೇ ಹಾಕಿಕೊಂಡಿತು...

ವಿಶ್ವಾಸ್... ಮಧ್ಯಾಹ್ನ ನಾನು ಸಿಕ್ಕೋದಿಲ್ಲ... ಬೆಂಗಳೂರಿಗೆ...

ಅರೆ ಮೇಡಂ... ಈ ಊರಿನಲ್ಲಿ ನೀವು ದೊಡ್ಡ ಸೆಲಿಬ್ರಿಟಿನಾ? ಭಾರೀ ಸ್ಪೆಷಲ್ ಟ್ರೀಟ್ಮೆಂಟ್ ಇದೆ ನಿಮಗೆ... ಬಿಟ್ಟ ಕಣ್ಣು ಬಿಟ್ಟುಕೊಂಡು ನನ್ನತ್ತಲೇ ನೋಡುತ್ತಿದ್ದ ವಿಶ್ವಾಸನತ್ತ ಅರೆನಗೆ ನಕ್ಕೆ.

ಅದು ಬಿಡಿ... ಈಗ ಮೀರಾ, ನರಹರಿ ಅಂತ ಬರ್ತಾರೆ... ಅವರ ಪರಿಚಯ ನಿಮಗೆ ಮಾಡಿಕೊಡ್ತೇನೆ... ಟ್ರೈನಿಂಗ್‌ಗೆ ಎಷ್ಟು ಜನ ಬರ್ತಾರೆ ಅಂತ ಅವರಿಗೆ ಗೊತ್ತು... ನಿಮಗೆ ಬೇರೆ ಏನಾದರೂ ಬೇಕಾದರೆ ನರಹರಿಗೆ ಹೇಳಿ...ಅವನು...

ಕೂತ್ಕೊಳ್ಳಿ ಮೇಡಂ... ಯಾಕಿಷ್ಟು ಟೆನ್ಷನ್ ನಲ್ಲಿ ಇದೀರಿ... ಬೊಂಬೆ ಮಾಡೋದಂತೂ ನೀವು ಕಲಿಯಲ್ಲ, ಆದರೆ ಬೊಂಬೆ ತರಹ ಕ್ಲಾಸಿನಲ್ಲಿ ಇರ್ತೀರಿ ಅಂತ ಅಂದ್ಕೊಂಡಿದ್ದೆ ... ಈಗ ನಂಗೆ ಕ್ಲಾಸ್ ಮಾಡೋ ಇಂಟರೆಸ್ಟೇ... ಹೊರಟು ಹೋಗ್ತಿದೆ... ಅಲ್ಲ... ನೀವು...

ಬಾಗಿಲು ತಳ್ಳಿಕೊಂಡು, ಕಾಫಿ ಹಿಡಿದು ಹೋಟೆಲ್‌ನ ಮ್ಯಾನೇಜರ್ ಒಳಗೆ ಬಂದಾಗ ವಿಶ್ವಾಸ್ ಮಾತು ನಿಲ್ಲಿಸಿದ.

ಬೇಡದ ಕಾಫಿಯನ್ನು ಗುಟುಕರಿಸಲಾರಂಭಿಸಿದೆ.

ಸಕ್ಕರೆ ಸಾಕಾ ಮೇಡಂ? ... ಬಿಸಿ ಸರಿಯಾಗಿದೆಯೇ ಮೇಡಂ? ..... ಎದುರಿಗೆ ನಿಂತ ಮ್ಯಾನೇಜರ್ ಪ್ರಶ್ನಿಸಿದಾಗ ತಲೆಯಾಡಿಸಿದೆ.

ಎಲ್ಲಾ ಸರಿಯಾಗಿದೆ. ಥ್ಯಾಂಕ್ ಯು

ವಿಕ್ರಮ ಹಳ್ಳಿಮನೆಯವರು ಚುನಾವಣೆಗೆ ನಿಂತರೆ ನಾವೆಲ್ಲಾ ಅವರಿಗೇ ಮತ ಹಾಕೋದು ಅಂತ ಹೇಳಿ ಮೇಡಂ... ನಮ್ಮ ಯಜಮಾನರು ಈ ಹೋಟೆಲ್, ಲಾಡ್ಜ್ ಶುರು ಮಾಡಿದಾಗ ಕೃಷ್ಣಪ್ಪ ಹಳ್ಳಿಮನೆಯವರು ತುಂಬಾ ಸಹಾಯ ಮಾಡಿದ್ದರಂತೆ... ಇನ್ನೇನಾದರೂ ಬೇಕಾ ಮೇಡಂ...?

ಇಲ್ಲ ಥ್ಯಾಂಕ್ ಯು... ಆಸಾಮಿ ಹೊರಡುವ ಲಕ್ಷಣವೇ ಇಲ್ಲ... ಮೀರಾ, ನರಹರಿ ಒಳಗೆ ಬಂದ ಮೇಲೆ ಆಚೆ ಹೋದ, ಹೋಗುವ ಮುಂಚೆ ಮತ್ತೊಮ್ಮೆ ಹಲ್ಲು ಕಿರಿದು ಕೈ ಮುಗಿದು ಹೋದ.

ಏನ್ರೀ ... ನೀವು ಈ ಊರಿನ ರಾಣಿಯೇನ್ರೀ? ಅಬ್ಬಾ... ಏನ್ ಟ್ರೀಟ್ಮೆಂಟ್... ತಡೆಹಿಡಿದಿದ್ದ ನಗುವನ್ನು ಹೊರಹಾಕಿದಾಗ ವಿಶ್ವಾಸನ ಮುಖವೆಲ್ಲಾ ಕೆಂಪಾಗಿತ್ತು.

ವಿಶ್ವಾಸ್...ಇವ್ರು ಮೀರಾ, ಇವ್ರು ನರಹರಿ. ಇವತ್ತು ಕ್ಲಾಸ್ ಶುರು ಮಾಡಿ, ಇವರಿಬ್ಬರು ನಿಮಗೆ ಹೆಲ್ಪ್ ಮಾಡ್ತಾರೆ. ನಿಮಗೆ ಏನು ಬೇಕಾಗುತ್ತೊ ಕೇಳಿ ...ನಾನು ನಾಳೆ ಅಥವಾ ನಾಡಿದ್ದು ಬರ್ತೀನಿ . ಮೀರಾ! ಎಷ್ಟು ಮಂದಿ ಬರ್ತಿದಾರಮ್ಮ?

ಇಪ್ಪತ್ತು ಮಂದಿ ಮೇಡಂ, ಬೆಂಗಳೂರಿಗೆ ಹೊರಟಿದ್ದೀರಾ? ಪುಟ್ಟ ಜುಟ್ಟಿನ ಹುಡುಗಿ ಮೀರಾ, ವಯಸ್ಸು ಮೂವತ್ತೆರಡಾದರೂ ಮದುವೆಯಾಗಿಲ್ಲ. ಆಗ ಮದುವೆ ಮಾಡಬೇಕೆಂದು ಓದಿಸಲಿಲ್ಲ ಅಪ್ಪ. ಈಗ ಹುಡುಗಿ ಬರೀ ಎಸ್.ಎಸ್.ಎಲ್.ಸಿ ಎಂದು ವಧು ಪರೀಕ್ಷೆಯಲ್ಲಿ ಫೇಲ್! ಮೂವತ್ತು ವರ್ಷ ಕಳೆಯುವ ಹೊತ್ತಿಗೆ ಹುಡುಗನನ್ನು ಹುಡುಕುವುದನ್ನೇ ಬಿಟ್ಟಿದ್ದಾರೆ ಅವಳ ತಂದೆ. ದಪ್ಪ ಗಾಜಿನ ಕನ್ನಡಕದ ಹಿಂದಿನ ಮುಗ್ಧ ಕಂಗಳ ಸೌಂದರ್ಯ ಯಾವ ಗಂಡಸಿಗೂ ಕಂಡಿಲ್ಲ. ಮೂರು ವರ್ಷದಿಂದ ನನ್ನ ಜೊತೆ ಸ್ತ್ರೀ ಶಕ್ತಿ ಯಲ್ಲಿ ಇದ್ದಾಳೆ. ಹೇಳಿದ್ದನ್ನು ಚಾಚೂ ತಪ್ಪದೇ ಅಚ್ಚುಕಟ್ಟಾಗಿ ಮಾಡುತ್ತಾಳೆ. ಓಡಾಡಲು ನರಹರಿ. ಹೆಂಗಸರನ್ನು ಒಟ್ಟುಗೂಡಿಸಿ ಕೆಲಸ ತೆಗೆಯಲು ಮೀರಾ.

ಹೌದು ಮೀರಾ, ನಾಳೆ ಅಥವಾ ನಾಡಿದ್ದು ಬರ್ತೀನಿ. ಅಲ್ಲಿಂದ ಏನಾದರೂ ಬೇಕಾ?

ಇಲ್ಲ ಮೇಡಂ. ಏನೂ ಬೇಡ. ನಾನು ನೋಡಿಕೊಳ್ತೀನಿ. ಹೋಗಿ ಬನ್ನಿ...

ಸರಿ ಮೀರಾ ನಮ್ಮ ಮಾವನವರು ಕಾಯ್ತಾ ಇರ್ತಾರೆ. ವಿಶ್ವಾಸ್! ಬರ್ಲಾ.. ಹಳ್ಳಿ ಹೆಂಗಸರು, ಸ್ವಲ್ಪ ತಾಳ್ಮೆಯಿಂದ ಹೇಳಿ ಕೊಡಿ... ನನ್ನತ್ತಲೇ ನೋಡುತ್ತಿದ್ದ ಅವನತ್ತ ತಿರುಗಿದೆ.

ವರಿ ಮಾಡ್ಕೋಬೇಡ್ರೀ... ಈ ಹೋಟೆಲ್ನೋರು ನಿಮಗೆ ತೋರಿಸಿದ ಗೌರವ ನೋಡಿ ದಂಗಾಗಿ ಹೋಗಿದ್ದೇನೆ, ನಿಜ ಹೇಳಿ... ನೀವ್ಯಾ... ಅವನ ಮಾತನ್ನು ಅರ್ಧಕ್ಕೆ ತಡೆದೆ.

ವಿಶ್ವಾಸ್, ನಂಗೆ ಲೇಟಾಗ್ತಾ ಇದೆ, ಬರ್ಲಾ... ಅವನತ್ತ ಬೆನ್ನು ತಿರುಗಿಸಿ ಹೊರನಡೆದೆ. ದಿಟ್ಟಿಸಿ ಹೇಗೆ ನೋಡುತ್ತಾನೆ! ಆದರೂ ಮುಜುಗುರವೆನ್ನಿಸಲಿಲ್ಲ... ಕಂಗಳಲ್ಲಿ ಸ್ನೇಹವಿದೆ, ಮೆಚ್ಚುಗೆಯಿದೆ... ಬಯಕೆ ಇಲ್ಲ ... ಹಾಗಾಗಿ

ಹೌದೇ? ಬಯಕೆ ಇಲ್ಲವೇ? ಎಷ್ಟು ಮಂದಿ ಗಂಡಸರು ಗೊತ್ತು? ಬಯಕೆಯ ದೃಷ್ಟಿ, ಮೆಚ್ಚುಗೆಯ ದೃಷ್ಟಿಯ ಅಂತರ ತಿಳಿಯುವಷ್ಟು ಜಾಣತನವಿದೆಯೇ ನಿನ್ನಲ್ಲಿ? ನನ್ನ ಅಂತರಾತ್ಮ ಪ್ರಶ್ನಿಸಿದಾಗ ತಲೆ ಕೊಡವಿಕೊಂಡೆ.

ನನ್ನ ಹಿಂದೆಯೇ ಬಂದ ವಿಶ್ವಾಸ್.

ನನ್ನ ಮಾತು ನಿಮ್ಮನ್ನು ಇರಿಟೇಟ್ ಮಾಡ್ತೇನ್ರಿ? ನಿಂತು ಹಿಂತಿರುಗಿದೆ.

ಇಲ್ಲ ... ಯಾಕೆ?...

ಅಲ್ಲಾರೀ ... ನಾನು ಮಾತಾಡ್ತಾ ಇದ್ರೆ, ಕೇಳಿಸ್ಕೊಳ್ದೆ ಬೇರೆ ಏನೋ ಹೇಳ್ತೀರಿ ... ನನ್ನ ಮಾತನ್ನು ಪೂರ್ಣಗೊಳಿಸೋಕೇ ಬಿಡಲ್ಲ. ಮೂರು ವಾರ ಇಲ್ಲಿ ಹೇಗೆ ಇರೋದು?

ಹೇಳಿ... ನಾನು ಯಾವಾಗ ಇವನ ಮಾತನ್ನು ತಡೆದೆ. ಅವನ ಹಿಂದೆ ಮೀರಾ, ನರಹರಿ ಕೂಡ ನಿಂತರು.

ಏನು? ಅವನು ಹುಬ್ಬೇರಿಸಿದಾಗ ನನಗೆ ತಬ್ಬಿಬ್ಬಾಯಿತು.

ಮೀರಾ, ನರಹರಿ ನನ್ನತ್ತಲೇ ನೋಡಿದಾಗ ಮುಜುಗರವಾಯಿತು.

ಮೀರಾ... ನೀನು ಶಾಲೆ ಹತ್ತಿರ ಹೋಗಿ ರೂಂನ ಕೀಸ್ ಇಸ್ಕೊ... ನರಹರಿ... ಕ್ಯಾಂಟೀನ್ ಸುಬ್ಬುರಾಮನಿಗೆ ಕಾಫಿ ಏರ್ಪಾಟು ಮಾಡಲು ಹೇಳಪ್ಪ... ಅವರಿಬ್ಬರೂ ನನ್ನ ದಾಟಿ ಮುಂದೆ ಹೋದರು.

ನಾನು ಕಾರಿನತ್ತ ಹೆಜ್ಜೆ ಹಾಕಿದೆ, ವಿಶ್ವಾಸ್ ಹಿಂದೆಯೇ ಬಂದ.

ಹೇಳಿ ಅಂದ್ಬಿಟ್ಟು ಹೊರಟು ಹೋಗ್ತಿದ್ದೀರೀ? .. ವಿಶ್ವಾಸನ ದನಿಯಲ್ಲಿ ಛೇಡುವಿಕೆ ಇತ್ತು.

ಅವನ ಹಿಂದೆ ಹೋಟೆಲ್‌ನ ಮ್ಯಾನೇಜರ್ ನನ್ನ ಮುಂದೆ ಕಾರಿನ ಡ್ರೈವರ್ ಸೂರಿ.

ವಿಶ್ವಾಸ್ ... ಮೃದು ಹೃದಯ ನನ್ನದು, ದನಿ ಗಡುಸಾಗುವುದು ಹೇಗೆ? ಉಗುಳು ನುಂಗಿದೆ.

ಬಂದ ಮೇಲೆ ಮಾತಾಡೋಣ... ನಂಗೆ ಲೇಟಾಗ್ತಿದೆ... ನಿಮಗೆ ಏನಾದರೂ ಬೇಕಾದರೆ ಮೀರಾ ಅಥವಾ ನರಹರಿನ ಕೇಳಿ ...

ಕಾರಿನ ಹಿಂದಿನ ಸೀಟಿನ ಬಾಗಿಲು ತೆರೆದು ಹತ್ತಿ ಕುಳಿತೆ. ಬಾಗಿಲು ಹಾಕಿ ತೆರೆದ ಕಿಟಕಿಯ ಮೇಲೆ ಕೈ ಇಟ್ಟು ಬಾಗಿ ನನ್ನತ್ತ ನೋಡಿದ ವಿಶ್ವಾಸ್.

ಯಾಕೆ ಸಪ್ಪಗಿದ್ದೀರಿ? ಬೆಂಗಳೂರಿಗೆ ಹೋಗಲು ಇಷ್ಟವಿಲ್ಲವೇ?

ಅವನತ್ತ ಕಣ್ಣರಳಿಸಿದೆ.

ಇಲ್ಲವಲ್ಲ... ಯಾಕೆ ಹಾಗೆ ಕೇಳ್ತಾ ಇದ್ದೀರಿ? ನನ್ನ ಮುಖವಾಡ ಸರಿಸಿ ಒಳಗಿನ, ಅಂತರಾಳದ ಬೇಸರವನ್ನು ಇವನು ಗುರುತಿಸಿದನೇ?

ಸರಿ... ಹೋಗಿ ಬನ್ನಿ ಇಷ್ಟವಿಲ್ಲದ, ಮನಸ್ಸಿಲ್ಲದ ಕೆಲಸ ಮಾಡಬೇಡಿ...

ಕಿರು ನಗೆ ನಕ್ಕೆ.

ನೀವು ಹೇಳ್ತಾ ಇರೋದು ಪುಸ್ತಕದ ಮಾತು... ನನ್ನದು ಬದುಕು...